॥ ಶ್ರೀ ಮಲೆ ಮಹದೇಶ್ವರಸ್ವಾಮಿ ಪ್ರಸನ್ನ ॥



ದೂರವಾಣಿ : ಎಸ್.ಟಿ.ಡಿ. : 08225
ಕಛೇರಿ : 272128
272129
ದೇವಸ್ಥಾನ : 272121
ಫ್ಯಾಕ್ಸ್ : 272123
sec. mmtemple@gmail.com

# ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರಬೆಟ್ಟ-571490, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

## 2019-20ನೇ ಸಾಲಿನ ಉಚಿತ ಸಾಮೂಹಿಕ ವಿವಾಹದ ಪ್ರಕಟಣೆ

ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀ ವಿಕಾರಿ ನಾಮ ಸಂವತ್ಸರೇ, ಜ್ಯೇಷ್ಠ ಮಾಸೇ, ಕೃಷ್ಣ ಪಕ್ಷ, ತದಿಗೆ ತಿಥಿ ದಿನಾಂಕ ***20-06-2019ನೇ ಗುರುವಾರ*** ಬೆಳಿಗ್ಗೆ 10-49 ರಿಂದ 10-59 ಘಂಟೆಯೊಳಗೆ ಸಲ್ಲುವ ಶುಭ ಸಿಂಹ ಲಗ್ನದಲ್ಲಿ **ಉಚಿತ ಸಾಮೂಹಿಕ ವಿವಾಹ** ಏರ್ಪಡಿಸಲಾಗಿದೆ. ಸದರಿ ಸಾಮೂಹಿಕ ವಿವಾಹದಲ್ಲಿ ಲಗ್ನವಾಗಲು ಬಯಸುವ ವಧೂ-ವರರು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅವರ ಹೆಸರು ಮತ್ತು ವಿಳಾಸವನ್ನು ಕಾರ್ಯದರ್ಶಿ, ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ ಇವರಲ್ಲಿ ದಿನಾಂಕ ***10-06-2019ನೇ ಸೋಮವಾರದ*** ಒಳಗಾಗಿ ನಿಗದಿತ ನಮೂನೇಯನ್ನು (ಅರ್ಜಿ) ಪಡೆದು ಭರ್ತಿ ಮಾಡಿ ಸಲ್ಲಿಸಲು ತಿಳಿಸಲಾಗಿದೆ.

01. ಮದುವೆ ಆಗ ಬಯಸುವ ವರನ ವಯಸ್ಸು 21ವರ್ಷ, ವಧುವಿಗೆ 18ವರ್ಷ ಪೂರ್ಣಗೊಂಡಿರಬೇಕು. ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಅಥವಾ ಮೂಳೆ ತಜ್ಞರಿಂದ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು.
02. ವರ ಮತ್ತು ವಧುವಿಗೆ ಭಾವಚಿತ್ರ ಲಗತ್ತಿಸಿರಬೇಕು.
03. ಜಾತಿ ದೃಢೀಕರಣ ಪತ್ರವನ್ನು ತಹಸೀಲ್ದಾರ್‌ರವರಿಂದ ಪಡೆದು ಲಗತ್ತಿಸಿರಬೇಕು.
04. ಈ ಹಿಂದೆ ಮದುವೆ ಆಗಿರದ ಬಗ್ಗೆ ಅವರು ವಾಸಿಸುವ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿ ಕಚೇರಿಯಿಂದ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಂದ ರುಜುವಾತು ಪತ್ರ ಪಡೆದು ಒಪ್ಪಿಸಬೇಕು.
05. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ.

ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ, ಕಾಲುಂಗುರ, ಸೀರೆ-ರವಿಕೆಯನ್ನು ಹಾಗೂ ವರನಿಗೆ ಪಂಚೆ, ಷರ್ಟು, ಟವಲ್‌ನ್ನು ಪ್ರಾಧಿಕಾರದ ವತಿಯಿಂದ ಉಚಿತವಾಗಿ ನೀಡಲಾಗುವುದು.

ವಧೂ-ವರರ ಕಡೆಯವರು ತಲಾ ಹತ್ತು ಜನಕ್ಕೆ ಮೀರದಂತೆ ಇರಬೇಕು. ಶ್ರೀಕ್ಷೇತ್ರದ ವತಿಯಿಂದ ಉಳಿದುಕೊಳ್ಳುವವರಿಗೆ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗುವುದು.

| | | |
|---|---|---|
| ಡಾ॥ ರಾಜಕುಮಾರ ಖತ್ರಿ, ಭಾ.ಆ.ಸೇ.<br>ಪ್ರಧಾನ ಕಾರ್ಯದರ್ಶಿಗಳು, ವಿಪತ್ತು ನಿರ್ವಹಣೆ ಮತ್ತು ನೋಂ ಮತ್ತು ಮು. ಹಾಗೂ ಮುಜರಾಯಿ ಇಲಾಖೆ, ಬೆಂಗಳೂರು | ಬಿ.ಬಿ. ಕಾವೇರಿ, ಭಾ.ಆ.ಸೇ.<br>ಜಿಲ್ಲಾಧಿಕಾರಿಗಳು, ಚಾ.ನಗರ. ಚಾಮರಾಜನಗರ | ಕೆ.ಎಂ. ಗಾಯಿತ್ರಿ, ಕೆ.ಎ.ಎಸ್ (ಹಿ.ಶ್ರೇ)<br>ಕಾರ್ಯದರ್ಶಿಗಳು<br>ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ. ಮಹದೇಶ್ವರಬೆಟ್ಟ |

**ವಿ.ಸೂ. : ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸ ಬಹುದು.**
**ಮೊಬೈಲ್ : 8277553322, 8277244893 ದೂರವಾಣಿ : 08225-272129**

2019-5-11 12:02

Scanned with CamScanner